**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.**
**C.C. No. 266/2018**

CW-1
PW-1

ಸಾಕ್ಷಿದಾರರ ಹೆಸರು : ಬಸವರಾಜ

ತಂದೆಯ ಹೆಸರು : ಅಮಿನಪ್ಪ

ವಯಸ್ಸು : 45 ವರ್ಷ

ಉದ್ಯೋಗ : ಡಿ ಗ್ರೂಪ್ ನೌಕರ

ವಾಸ ಸ್ಥಳ : ಲಿಂಗಸುಗೂರು

ದಿನಾಂಕ 28.02.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ದಂ.ಪ್ರ.ಸಂ.ಕಲಂ 299 ರ ಅಡಿಯಲ್ಲಿ ಮಾನ್ಯ ಸ.ಸ.ಅ. ರವರಿಂದಃ**

1. ನಾನು 2014 ರಿಂದ 2019 ರವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಿ ಗ್ರೂಪ್ ನೌಕರ ಎಂದು ಕೆಲಸ ಮಾಡುತ್ತಿದ್ದೆನೆ. ನನಗೆ ಚಾಸಾ-2 ರಿಂದ 10 ಗೋತ್ತು. ದಿಃ 04-12-2015 ರಂದು ಬೆ.10.30 ಗಂಟೆ ಸುಮಾರಿಗೆ ನಾನು ಆರೋಗ್ಯ ಕೇಂದ್ರ ವಸತಿ ಗೃಹದಲ್ಲಿ ಇದ್ದಾಗ ಆಸ್ಪತ್ರೆಯ ಮುಂದೆ ಜನರು ನಿಂತಿದ್ದರು. ಅದನ್ನು ನೋಡಲು ಹೋದಾಗ ಒಬ್ಬ ವ್ಯಕ್ತಿ ಮದ್ಯಪಾನ ಮಾಡಿ ಬಿದ್ದಿದ್ದನು. ನಾನು ಅವರಿಗೆ ಚಿಕಿತ್ಸೆ ನೀಡಿ ಪಟ್ಟಿ ಕಟ್ಟಿರುತ್ತೇನೆ. ನಂತರ ಅವರನ್ನು ಅಂಬುಲೆನ್ಸ ಮುಖಾಂತರ ಕಳುಹಿಸಿರುತ್ತೇನೆ. ಅದೇ ಸಮಯದಲ್ಲಿ ವಿದ್ಯುತಚ್ಛಕ್ತಿಯಿಂದ ಗಾಯಗೊಂಡ ವಿರೇಶ ಎಂಬ ಬಾಲಕನಿಗೆ ಚಾಸಾ-4 ರಿಂದ 6 ಚಿಕಿತ್ಸೆ ಕೊಡುತ್ತಿದ್ದರು. ಆ ಸಮಯದಲ್ಲಿ ಆಸ್ಪತ್ರೆಯಲ್ಲಿ ಸುಮಾರು 100 ರಿಂದ 150 ಜನ ಸೇರಿದರು. ಸದರಿ ಜನರು ಕಲ್ಲು ತೂರಾಟ ಮಾಡಿರುತ್ತಾರೆ. ಅದರಿಂದ ಆಸ್ಪತ್ರೆಯ ಕಿಡಕಿ ಮತ್ತು ಗ್ಲಾಸ್ ಗಳು ಹೊಡೆದು ಹಾಕಿರುತ್ತಾರೆ. ಆ ಕಾರಣಕ್ಕಾಗಿ ನಾನು ಪೋಲಿಸರಿಗೆ ದೂರು

ನೀಡಿರುತ್ತೆನೆ. ನಾನು ನೀಡಿದ ದೂರು ನೋಡುತ್ತಿದ್ದು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಮತ್ತು ಪು.ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿರುತ್ತಾರೆ. ಅಂತೆಯೇ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

1. ಚಿಕಿತ್ಸೆಗೆ ಬಂದ ವಿರೇಶ ಎಂಬ ವಿದ್ಯಾರ್ಥಿ ಮೃತಪಟ್ಟಿರುವುದರಿಂದ ಉದ್ರಿತಗೊಂಡ ಅಲ್ಲಿ ಜನರು, ಆಸ್ಪತ್ರೆಯ ಕಿಡಕಿ, ಬಾಗಿಲು, ಗ್ಲಾಸ್, ಅಲ್ಮರ, ಕಂಪ್ಯೂಟರ್ ಮತ್ತು ಇತರ ವಸ್ತುಗಳನ್ನು ಹೊಡೆದುಹಾಕಿದಲ್ಲದೇ ಬೆಂಕಿ ಹಚ್ಚಿ ಸುಟ್ಟು ಸುಮಾರು 30 ಲಕ್ಷ ಸರಕಾರದ ಆಸ್ತಿಯನ್ನು ನಷ್ಟ ಪಡಿಸಿರುತ್ತಾರೆ ಅಂದರೆ ಸರಿ. ಅಲ್ಲಿದ್ದ ಜನರು ಚಾಸಾ-4 ರ ಮೇಲೆ ಹಲ್ಲೆ ಮಾಡಲು ಹೋಗಿದ್ದರು ಅಂದರೆ ಸರಿ. ಮರುದಿನ ಪೋಲಿಸರು ಸ್ಥಳ ಪರಿಶೀಲನೆ ಮಾಡಿ ಸುಟ್ಟು ಹೋದ ಆಸ್ಪತ್ರೆಯ ಪೀಠೋಪಕರಣಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಘಟನೆಯಲ್ಲಿ ತೊಡಗಿದ್ದ ವ್ಯಕ್ತಿಗಳ ಹೆಸರನ್ನು ತಿಳಿದುಕೊಂಡು, ಅವರನ್ನು ಗುರುತಿಸಿ ದಿಃ 05-12-2015 ರಂದು ಹೇಳಿಕೆ, ದಿಃ 13-06-2016 ರಂದು ಪು.ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಹೇಳಿಕೆ ನಿಪಿ.2 ಎಂದು, ಪು.ಹೇಳಿಕೆ ನಿಪಿ.3 ಎಂದು ಗುರುತಿಸಲಾಯಿತು. ನಾನು ನಿಪಿ.1 ರಂತೆ ದೂರು, ನಿಪಿ.2 ರಂತೆ ಹೇಳಿಕೆ ಮತ್ತು ನಿಪಿ.3

ರಂತೆ ಪ್ರ.ಹೇಳಿಕೆ ನೀಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು. ಮಾನ್ವಿ**